## ಯಾವುದು ರುಚಿ?

ಒಮ್ಮೆ ಮನೆಯಲ್ಲಿ ದೋಸೆ ಮಾಡಿದಾಗ ಅದರೊಂದಿಗೆ ಪಲ್ಯ ಹೇಗಿದ್ದರೆ ಒಳ್ಳೆಯದು ಎಂಬ ಚರ್ಚೆ ನಡೆಯುತ್ತಿತ್ತು. ಚೆನ್ನಾಗಿ ಕುದಿಸಿದ ಬಟಾಟೆ (ಆಲೂಗಡ್ಡೆ), ಸಾಕಷ್ಟು ಉಳ್ಳಾಗಡ್ಡೆ (ಈರುಳ್ಳಿ) ಹಾಕಿ ಮಾಡಿದರೆ ರುಚಿ ಎಂದು ಕೆಲವರೆಂದರೆ, ಇಂಗು–ಜೀರಿಗೆ ಒಗ್ಗರಣೆ ಹಾಕಿದ ಬಟಾಟೆಗೆ ಕಡಿಮೆ ಉಳ್ಳಾಗಡ್ಡಿ ಹಾಕಿದರೂ ರುಚಿ ಎನ್ನುವ ವಾದ ಇನ್ನೊಬ್ಬರದು. ಆಗ ಮನೆಗೆ ಕಾಯಿಪಲ್ಯ ತರುವ ಸ್ನೇಹಿತ, ‘ಉಳ್ಳಾಗಡ್ಡೆ, ಬಟಾಟೆ ಇವುಗಳಲ್ಲಿ ಯಾವುದು ಸೋವಿ (ಕಡಿಮೆ ಬೆಲೆ) ಇರುತ್ತದೆಯೋ ಅದನ್ನು ಹೆಚ್ಚಿಗೆ ಹಾಕಿದರೆ ಪಲ್ಯ ರುಚಿಯಾಗಿರುತ್ತದೆ’ ಎಂದಾಗ ಎಲ್ಲರೂ ನಗತೊಡಗಿದೆವು.

**ರವಿ ಮುನವಳ್ಳಿ**



ಕಲೆ: ಗಣೇಶ ಆಚಾರ್ಯ



## ತಲೆಯ ಮೇಲೆ

ಬಹಳ ವರ್ಷಗಳ ಹಿಂದೆ ನಡೆದದ್ದು. ಅಂದು ಭಾನುವಾರ ರಜೆ ಇತ್ತು. ನಮ್ಮ ಮೈದುನ ತನ್ನ ಹೆಂಡತಿ ಮಕ್ಕಳೊಂದಿಗೆ ಸಂಜೆ ನಮ್ಮ ಮನೆಗೆ ಬಂದರು. ಪಡಸಾಲೆಯಲ್ಲಿ ಎಲ್ಲರೂ ಮಾತನಾಡುತ್ತಾ ಕುಳಿತುಕೊಂಡಿದ್ದೆವು. ಮಕ್ಕಳ ಆಟ, ಚೀರಾಟ, ಗಲಾಟೆ ನಮ್ಮ ಮಾತಿಗೆ ಅಡ್ಡಿಯಾಗತೊಡಗಿತ್ತು. ಎಷ್ಟು ಸಲ ಹೇಳಿದರೂ ಅವರ ಗಲಾಟೆ ಕಡಿಮೆ ಏನೂ ಆಗಲಿಲ್ಲ. ಅದರಲ್ಲೂ ಮೈದುನನ ಮಗ ಸಚಿನನ ಗಲಾಟೆ ಹೆಚ್ಚಾಗಿತ್ತು. ಅವನ ಅಪ್ಪ ಸಚ್ಚಿಗೆ, ‘ಎಷ್ಟು ಗಲಾಟೆ ಮಾಡ್ತಾ ಇದ್ದೀಯಾ? ಸ್ವಲ್ಪ ಸಲಿಗೆ ಕೊಟ್ಟಿದ್ದೇ ಸೈ, ತಲೆಗೇರಿ ಕುಳಿತು ಬಿಡ್ತೀಯ ನೋಡು’ ಎಂದು ಗದರಿದರು. ಅದಕ್ಕೆ ಸಚ್ಚಿ, ‘ಇಲ್ಲ ಪಪ್ಪ, ನಿಮ್ಮ ತಲೆಯ ಮೇಲೆ ಕುಳಿತುಕೊಂಡರೆ ಜಾರಿ ಬಿದ್ದುಬಿಡುತ್ತೇನೆ, ಅಷ್ಟೆ’ ಅನ್ನಬೇಕೆ? ಆಗ ನಾವೆಲ್ಲಾ ಮೈದುನನ ತಲೆ ನೋಡಿದೆವು. ಅವರ ಮುಂದಲೆಯಲ್ಲಿ ಕೂದಲುಗಳಿಲ್ಲದೆ ಬೋಳಾಗಿದ್ದನ್ನು ನೋಡಿ ನಗು ತಡೆಯಲಾಗಲಿಲ್ಲ!

**ಸುನಂದ ಸಿದ್ದಪ್ಪ ಮುಳೆ**